## ಸುಧಾರಿತ ಡಿಜಿಟಲ್ ಲ್ಯಾಬ್ । ಡಾ.ವಿಜಯ ಸಂಕೇಶ್ವರರಿಂದ ಉದ್ಘಾಟನೆ

# ಎನ್ಐಟಿಕೆಯಲ್ಲಿ ಕಿಂಡಲ್ ಗ್ರಂಥಾಲಯ




ಎನ್ಐಟಿಕೆ ಸುರತ್ಕಲ್‌ನ ಅತ್ಯಾಧುನಿಕ ಕಿಂಡಲ್ ಲೈಬ್ರರಿ, ತಾಂತ್ರಿಕವಾಗಿ ಸುಧಾರಿತ ಡಿಜಿಟಲ್ ಲ್ಯಾಬ್ ಸೌಲಭ್ಯ ವನ್ನು ಎನ್ಐಟಿಕೆ ಆಡಳಿತ ಮಂಡಳಿ ಅಧ್ಯಕ್ಷ ಡಾ.ವಿಜಯ ಸಂಕೇಶ್ವರ ಉದ್ಘಾಟಿಸಿದರು.

**ಮಂಗಳೂರು:** ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ಐಟಿಕೆ)ದ ಅತ್ಯಾಧುನಿಕ ಕಿಂಡಲ್ ಲೈಬ್ರರಿ, ತಾಂತ್ರಿಕವಾಗಿ ಸುಧಾರಿತ ಡಿಜಿಟಲ್ ಲ್ಯಾಬ್ ಸೌಲಭ್ಯ ಮತ್ತು ಹೊಸದಾಗಿ ಸ್ಥಾಪಿಸಲಾದ ಅಕ್ಷರ ಕೆಫೆಟೇರಿಯಾವನ್ನು ಎನ್ಐಟಿಕೆ ಆಡಳಿತ ಮಂಡಳಿ ಅಧ್ಯಕ್ಷ ಡಾ.ವಿಜಯ ಸಂಕೇಶ್ವರ ಇತ್ತೀಚೆಗೆ ಉದ್ಘಾಟಿಸಿದರು.

ಎನ್ಐಟಿಕೆ ಕೇಂದ್ರ ಗ್ರಂಥಾಲಯದಲ್ಲಿ ಮಾತನಾಡಿದ ಗ್ರಂಥಪಾಲಕ ಡಾ.ಮಲ್ಲಿಕಾರ್ಜುನ ಅಂಗಡಿ, 1996ನೇ ಬ್ಯಾಚ್‌ನ ಹಿರಿಯ ವಿದ್ಯಾರ್ಥಿಗಳ ಸಹಕಾರದಲ್ಲಿ ಈ ಗ್ರಂಥಾಲಯ ಅಭಿವೃದ್ಧಿಗೊಂಡಿದೆ. ಇದಕ್ಕಾಗಿ ಎನ್ಐಟಿಕೆ ಗ್ರಂಥಾಲಯ ಋಣಿ. ಹಿರಿಯ ವಿದ್ಯಾರ್ಥಿಗಳು 15 ಕಿಂಡಲ್ ಸಾಧನಗಳನ್ನು ನೀಡಿದ್ದಾರೆ. ಕಿಂಡಲ್ ಗ್ರಂಥಾಲಯ ಪೋಷಕರಿಗೆ ಇ-ಪುಸ್ತಕಗಳು ಮತ್ತು ಡಿಜಿಟಲ್ ಸಂಪನ್ಮೂಲಗಳ ವಿಶಾಲ ಸಂಗ್ರಹ ಇದೆ ಎಂದರು.

ಎನ್ಐಟಿಕೆ ಕಲಿಕಾ ಸಂಪನ್ಮೂಲಗಳ ಉಸ್ತುವಾರಿ ಪ್ರೊ.ಎಸ್. ಎಸ್.ಕಾಮತ್, ರಿಜಿಸ್ಟ್ರಾರ್ ರವೀಂದ್ರನಾಥ್ ಕೆ, ಡೀನ್‌ಗಳಾದ ಪ್ರೊ.ದ್ವಾರಕೇಶ್, ಪ್ರೊ.ಕೆ.ವಿ.ಗಂಗಾಧರನ್, ಪ್ರೊ.ಜಿ.ಸಿ.ಮೋಹನ್, ಪ್ರೊ.ಎಸ್.ಎಸ್.ರಾವ್, ಎನ್ಐಟಿಕೆ ಸಿಬ್ಬಂದಿ ಮತ್ತು ವಿದ್ಯಾರ್ಥಿ ಉಪಸ್ಥಿತರಿದ್ದರು.

### ವೈವಿಧ್ಯಮಯ ಸಂಗ್ರಹ

ಈ ಗ್ರಂಥಾಲಯ ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಮುಂಚೂಣಿಯಲ್ಲಿದ್ದು, 5 ಕೋಟಿ ರೂ.ವಾರ್ಷಿಕ ಬಜೆಟ್ ಹೊಂದಿದೆ. 87 ಸಾವಿರಕ್ಕೂ ಹೆಚ್ಚು ಮುದ್ರಿತ ಪುಸ್ತಕ, 23,776 ಇ-ಪುಸ್ತಕ, 69 ಮುದ್ರಣ ನಿಯತಕಾಲಿಕೆ, 11,094 ಪೂರ್ಣ ಪಠ್ಯ ಇ-ಜರ್ನಲ್ ಗಳು, 16,357 ಬೌಂಡ್ ಸಂಪುಟ, 2,453 ಸಿಡಿ ಆರ್‌ಒಎಂಗಳು, 700ಕ್ಕೂ ಹೆಚ್ಚು ಸಂಶೋಧನಾ ಇ-ಪ್ರಬಂಧ ಮತ್ತು 26 ಡೇಟಾ ಬೇಸ್‌ಗಳ ಶ್ರೀಮಂತ ಮತ್ತು ವೈವಿಧ್ಯಮಯ ಸಂಗ್ರಹ ಹೊಂದಿದೆ.

Vijayavani, Date:06/02/24, p, no - 03